ಸರ್ಕಾರಿ ಆದೇಶ ಸಂಖ್ಯೆ:ವಾಕೈ 57 ಜಕೈಯೋ 2013, ದಿನಾಂಕ:30-01-2014ಕ್ಕೆ ಅನುಬಂಧ -1

2013-14 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಾಮೂಹಿಕ ಸೌಲಭ್ಯ ಕೇಂದ್ರ ನಿರ್ಮಾಣದ ಮಾರ್ಗಸೂಚಿ.

ಯೋಜನಾ ಮೊತ್ತದ ವಿವರ:

(1) ಸರ್ಕಾರದ ಸಹಾಯಧನ - ರೂ.10.00ಲಕ್ಷ

(2) ಘಟಕ ವೆಚ್ಚದ ಹೆಚ್ಚುವರಿ ಮೊತ್ತವನ್ನು ಸಂಸ್ಥೆ ಭರಿಸಬೇಕು.

(3) ಸಂಸ್ಥೆಯ ಹೆಸರಿನಲ್ಲಿ ಸ್ವಂತ ನಿವೇಶನ ಹೊಂದಿರಬೇಕು.

(4) ಕನಿಷ್ಟ 1500 ಚದುರಡಿ ವಿಸ್ತೀರ್ಣವುಳ್ಳ ಕಟ್ಟಡವನ್ನು ನಿರ್ಮಿಸಬೇಕು.

ಅರ್ಹತೆಗಳು:

ಕರ್ನಾಟಕ ರಾಜ್ಯದಲ್ಲಿ ನಿಯಮಾನುಸಾರ ನೋಂದಾಯತ ಕೈಮಗ್ಗ ನೇಕಾರರ ಸಹಕಾರ ಸಂಘ, ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘ, ವಿವಿದ್ದೋದ್ದೇಶಗಳ ನೇಕಾರರ ಸಹಕಾರ ಸಂಘಗಳು.

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :

- ಉದ್ದೇಶಿತ ಕಟ್ಟಡ ನಿರ್ಮಿಸುವಲ್ಲಿ ಕಾಮಗಾರಿಯ ಪ್ರಗತಿಯನ್ನು ಆಧರಿಸಿ 4 ಕಂತುಗಳಲ್ಲಿ ಪ್ರತಿ ಕಂತು ರೂ.2.50 ಲಕ್ಷದಂತೆ ಮೊದಲನೆ ಕಂತು ಶೇ.25, ಎರಡನೇ ಕಂತು ಶೇ.25, ಮೂರನೇ ಕಂತು ಶೇ.25 ಮತ್ತು ನಾಲ್ಕನೇ ಕಂತು ಶೇ.25 ರಷ್ಟು ಹಣವನ್ನು ಸಿವಿಲ್ ಕಂಟ್ರಾಕ್ಟರ್ ಹೆಸರಿನಲ್ಲಿ ಅಥವಾ ಸಹಕಾರ ಸಂಘ - ಸಂಸ್ಥೆಗಳ ಹೆಸರಿನಲ್ಲಿ ಬಿಡುಗಡೆ ಮಾಡುವುದು.
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮವನ್ನು ಪಾಲಿಸುವುದು.

ಇತರೆ ನಿಯಮಗಳು :

(1) ಕಟ್ಟಡದ ಮೇಲೆ "ಕೈಮಗ್ಗ ಮತ್ತು ಜವಳಿ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಸಾಮೂಹಿಕ ಸೌಲಭ್ಯ ಕೇಂದ್ರ ಕಟ್ಟಡ" ಎಂದು ನಾಮಫಲಕ ಬರೆಸತಕ್ಕದ್ದು.

(2) ಇಲಾಖೆಯ ಅನುಮತಿ ಇಲ್ಲದೆ ಈ ಯೋಜನೆಯಡಿ ನಿರ್ಮಿಸಿದ ಆಸ್ತಿಯನ್ನು ಪರಬಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

(3) ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಅಂದಾಜು ಮೊತ್ತವನ್ನು ಭರಿಸಲು ಸಂಸ್ಥೆಯಿಂದ ಆಡಳಿತ ಮಂಡಳಿ ಠರಾವಿನೊಂದಿಗೆ ಖಾತ್ರಿ ನೀಡತಕ್ಕದ್ದು.

(4) ಉದ್ದೇಶಿತ ಕಟ್ಟಡವನ್ನು ನೇಕಾರರ ನೇಯ್ಗೆ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸುವುದು.

(5) ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಅಧಿಕೃತ ರಿಜಿಸ್ಟರ್ಡ್ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ದೃಢೀಕರಿಸುವುದು.

(6) ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು ಹಾಗೂ ದಾಖಲೆಯಾಗಿ ಫೋಟೋ ಪ್ರತಿ ಪಡೆದು ಜಿಲ್ಲಾ ಕಛೇರಿಯಲ್ಲಿ ಇಡತಕ್ಕದ್ದು.

ಪ್ರಸ್ತಾವನೆಯ ದಾಖಲಾತಿಗಳು :

1. ನಮೂನೆ - 1 ರಿಂದ 29 ರಲ್ಲಿ ಸಂಘದ / ಸಂಸ್ಥೆಯ ಮಾಹಿತಿ.
2. ಸಂಘ / ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಸಹಕಾರ ಸಂಘದ ಬೈಲಾ ಪಟ್ಟಿ / ಉಪ ನಿಯಮಗಳ ಪ್ರತಿ.
4. ಆಡಳಿತ ಮಂಡಳಿ ಠರಾವು ಪ್ರತಿ
5. ಆಡಳಿತ ಮಂಡಳಿ ನಿರ್ದೇಶಕರ ವಿಳಾಸದ ಪಟ್ಟಿ
6. ಸಹಕಾರ ಸಂಘ / ಸಂಸ್ಥೆಯಲ್ಲಿ ನೋಂದಾಯಿತ ಸದಸ್ಯರ ಪಟ್ಟಿ.
7. ಖಾಲಿ ನಿವೇಶನದ ದಾಖಲಾತಿಗಳು
8. ಕಟ್ಟಡದ ಅಂದಾಜು ಪಟ್ಟಿ
9. ಕಟ್ಟಡದ ನಕ್ಷೆ
10. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಸಂಸ್ಥೆಯು ಭರಿಸುವ ಮುಚ್ಚಳಿಕೆ ಪತ್ರ.

Devoji Rao

(ದೇವೋಜಿರಾವ್)

ಪೀಠಾಧಿಕಾರಿ(ಜವಳಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ